/485246/2023

ಕರ್ನಾಟಕ ಸರ್ಕಾರ
GOVERNMENT OF KARNATAKA

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
Office of
Principal Chief conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ ಬೆಂಗಳೂರು-03
Aranya Bhavan, 18th Cross,
Malleshwaram, Bengaluru-03
Tel: 080 23343770
Email: pccfkar@gmail.com

E-1104901

**No**: KFD/HOFF/B1(EST)/85/2023-PnR-KFD
**ಕಛೇರಿ ಆದೇಶ ಸಂಖ್ಯೆ:** 34 /2023-24

ದಿನಾಂಕ: 15-09-2023

## ಕಛೇರಿ ಆದೇಶ [VI]

**ವಿಷಯ:** ವಲಯ ಅರಣ್ಯಾಧಿಕಾರಿಗಳ ವರ್ಗಾವಣೆ ಕುರಿತು.

**ಉಲ್ಲೇಖ:**

1. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 158 ಎಫ್‌ಎನ್‌ಜಿ 2023(e), ದಿನಾಂಕ: 09.08.2023 *[ಒಟ್ಟು 202 ವಲಯ ಅರಣ್ಯ ಅಧಿಕಾರಿಗಳು].*
2. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 335 ಎಫ್‌ಎನ್‌ಜಿ 2022, ದಿನಾಂಕ: 14.08.2023 *[ಒಟ್ಟು 2 ವಲಯ ಅರಣ್ಯ ಅಧಿಕಾರಿಗಳು].*
3. ಈ ಕಛೇರಿ ಆದೇಶ [I] ಸಂಖ್ಯೆ:27/2023-24, ದಿನಾಂಕ:24.08.2023 *[147 ವಲಯ ಅರಣ್ಯಾಧಿಕಾರಿಗಳು].*
4. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 158 ಎಫ್‌ಎನ್‌ಜಿ 2023(e), ದಿನಾಂಕ: 24.08.2023 *[ವರ್ಗಾವಣೆ-38, ಮಾರ್ಪಾಡು-20, ರದ್ದತಿ-13].*
5. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 158 ಎಫ್‌ಎನ್‌ಜಿ 2023(e), ದಿನಾಂಕ: 30.08.2023 *[ಪರಿಷ್ಕರಣೆ].*
6. ಈ ಕಛೇರಿ ಆದೇಶ [II] ಸಂಖ್ಯೆ:28/2023-24, ದಿನಾಂಕ:28.08.2023 *[64 ವಲಯ ಅರಣ್ಯಾಧಿಕಾರಿಗಳು].*
7. ಈ ಕಛೇರಿ ಆದೇಶ [III] ಸಂಖ್ಯೆ:29/2023-24, ದಿನಾಂಕ:29.08.2023 *[02 ವಲಯ ಅರಣ್ಯಾಧಿಕಾರಿಗಳು].*
8. *ಈ ಕಚೇರಿಯ ಆದೇಶ [IV] ಸಂಖ್ಯೆ: 32/2023-24, ದಿನಾಂಕ: 02-09-2023. [02 ವಲಯ ಅರಣ್ಯಾಧಿಕಾರಿಗಳು].*
9. *ಈ ಕಚೇರಿಯ ಆದೇಶ [V] ಸಂಖ್ಯೆ: 32/2023-24, ದಿನಾಂಕ: 02-09-2023. [01 ವಲಯ ಅರಣ್ಯಾಧಿಕಾರಿ].*
10. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 174 ಎಫ್‌ಎನ್‌ಜಿ 2023(e), ದಿನಾಂಕ: 12.09.2023 *[01 ವಲಯ ಅರಣ್ಯಾಧಿಕಾರಿ].*
11. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 177 ಎಫ್‌ಎನ್‌ಜಿ 2023(e), ದಿನಾಂಕ: 13.09.2023 *[01 ವಲಯ ಅರಣ್ಯಾಧಿಕಾರಿ].*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ *(ಮಾನ್ಯ ಮುಖ್ಯ ಮಂತ್ರಿಯವರಿಂದ/ಮಾನ್ಯ ಅಪಜೀ ಸಚಿವರಿಂದ ಅನುಮೋದಿತ)* 202 ವಲಯ ಅರಣ್ಯಾಧಿಕಾರಿಗಳು ಹಾಗೂ ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ 02 ವಲಯ ಅರಣ್ಯಾಧಿಕಾರಿಗಳು ಸೇರಿದಂತೆ ಒಟ್ಟು 204 ವಲಯ ಅರಣ್ಯಾಧಿಕಾರಿಗಳ ವರ್ಗಾವಣೆಗೆ ಅನುಮೋದನೆ/ನಿರ್ದೇಶನದಂತೆ, ಮತ್ತು ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರ ಕಾರ್ಯಾಲಯದಿಂದ ದೂರವಾಣಿ ಮೂಲಕ ನೀಡಿದ ಸೂಚನೆಗಳನ್ವಯ ಉಲ್ಲೇಖ (3)ರ ಈ ಕಛೇರಿ ಆದೇಶದಲ್ಲಿ ಒಟ್ಟು 147 ವಲಯ ಅರಣ್ಯಾಧಿಕಾರಿಗಳಿಗೆ ಹಾಗೂ ಉಲ್ಲೇಖ (4)ರ ಸರ್ಕಾರದ ಪತ್ರದಲ್ಲಿ ವಲಯ ಅರಣ್ಯಾಧಿಕಾರಿಗಳ ವರ್ಗಾವಣೆಗೆ *[ಭಾಗ-1 (ವರ್ಗಾವಣೆ), ಭಾಗ-2 (ಮಾರ್ಪಾಡು) ಮತ್ತು ಭಾಗ-3 (ರದ್ದತಿ) ಸೇರಿದಂತೆ ಒಟ್ಟು 71 ವಲಯ ಅರಣ್ಯಾಧಿಕಾರಿಗಳು]* ಹಾಗೂ ಉಲ್ಲೇಖ (5)ರ ಸರ್ಕಾರದ ಪತ್ರದಲ್ಲಿ ವಲಯ ಅರಣ್ಯಾಧಿಕಾರಿಯ ವರ್ಗಾವಣೆಗೆ ಅನುಮೋದನೆ/ನಿರ್ದೇಶನದಂತೆ ಉಲ್ಲೇಖ (6), (7) (8) ಮತ್ತು (9) ರ ಈ ಕಚೇರಿ ಆದೇಶಗಳಲ್ಲಿ ವಲಯ ಅರಣ್ಯಾಧಿಕಾರಿಗಳನ್ನು ವರ್ಗಾಯಿಸಿ/ ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ.

ಪ್ರಸ್ತುತ, ಉಲ್ಲೇಖ (10) ಸರ್ಕಾರದ ಪತ್ರದಲ್ಲಿ 01 ವಲಯ ಅರಣ್ಯಾಧಿಕಾರಿ ಹಾಗೂ ಉಲ್ಲೇಖ (11)ರ ಸರ್ಕಾರದ ಪತ್ರದಲ್ಲಿ ಉಲ್ಲೇಖ (4)ರ ಸರ್ಕಾರದ ಪತ್ರದಲ್ಲಿನ ಕ್ರಮ ಸಂಖ್ಯೆ: 36ರಲ್ಲಿನ ವಲಯ ಅರಣ್ಯಾಧಿಕಾರಿ ವರ್ಗಾವಣೆಯನ್ನು ಮಾರ್ಪಡಿಸಿ 01 ವಲಯ ಅರಣ್ಯಾಧಿಕಾರಿಯ ವರ್ಗಾವಣೆಗೆ ಅನುಮೋದನೆ/ನಿರ್ದೇಶನದಂತೆ, ಉಲ್ಲೇಖ (6), (7) (8) ಮತ್ತು (9) ರ ಈ ಕಚೇರಿ ಆದೇಶಗಳ ಮುಂದುವರಿಕೆಯಾಗಿ **ಈ ಕೆಳಕಂಡ ವಲಯ ಅರಣ್ಯಾಧಿಕಾರಿಗಳನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಹುದ್ದೆಗಳಿಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಿ/ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.**

| ಕ್ರ. ಸಂ. | ಸರ್ಕಾರ ಪತ್ರ ಸಂಖ್ಯೆ | ಹೆಸರು ಹುದ್ದೆ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ | ವರ್ಗಾಯಿಸಿರುವ ಸ್ಥಳ |
|---|---|---|---|
| 1 | ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 174 ಎಫ್‌ಎನ್‌ಜಿ 2023(e), ದಿನಾಂಕ: 12.09.2023 | **ಶ್ರೀ ಅಂತೋಣಿ ರೇಗೋ,** ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ನರಸಿಂಹರಾಜಪುರ [ಸಾಮಾಜಿಕ ಅರಣ್ಯ ವಿಭಾಗ, ಚಿಕ್ಕಮಗಳೂರು] | ವಲಯ ಅರಣ್ಯಾಧಿಕಾರಿ, ಕೋಡಿಹಳ್ಳಿ, ವನ್ಯಜೀವಿ ವಲಯ, ಕೋಡಿಹಳ್ಳಿ, [ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗ] **[ಶ್ರೀ ಪ್ರಶಾಂತ್ ಹೆಚ್.ವಿ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ]** |
| 2 | ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 177 ಎಫ್‌ಎನ್‌ಜಿ 2023(e), ದಿನಾಂಕ: 13.09.2023 | **ಶ್ರೀ ವಾಗೀಶ ಬಿ.ಜೆ,** ವಲಯ ಅರಣ್ಯಾಧಿಕಾರಿ, ಲಕ್ಕವಳ್ಳಿ ವಲಯ, ಲಕ್ಕವಳ್ಳಿ [ಭದ್ರಾವತಿ ವಿಭಾಗ]<br>*[ಶ್ರೀ ಪ್ರಮೋದ್ ಬಿ., ವಲಯ ಅರಣ್ಯಾಧಿಕಾರಿ, ಕೋಸ್ಟಲ್ & ಮರೈನ್ ಘಟಕ, ಕಾರವಾರ ವಿಭಾಗ ಇವರನ್ನು ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 158 ಎಫ್‌ಎನ್‌ಜಿ 2023 (ಇ) ದಿನಾಂಕ: 24-08-2023ರಲ್ಲಿನ ಕ್ರಮ ಸಂಖ್ಯೆ: 36ರಲ್ಲಿ ವಲಯ ಅರಣ್ಯಾಧಿಕಾರಿ, ಮುಂಡಗೋಡು ವಲಯ, ಮುಂಡಗೋಡು, ಯಲ್ಲಾಪುರ ವಿಭಾಗ [ಶ್ರೀ ಸುರೇಶ್ ಕುಲ್ಲೊಳ್ಳಿ ಇವರ ಜಾಗಕ್ಕೆ ವರ್ಗಾಯಿಸಿ ಅನುಮೋದನೆ ನೀಡಿರುವುದನ್ನು ಮಾರ್ಪಡಿಸಿ]* | ವಲಯ ಅರಣ್ಯಾಧಿಕಾರಿ, ಮುಂಡಗೋಡು ವಲಯ, ಮುಂಡಗೋಡು [ಯಲ್ಲಾಪುರ ವಿಭಾಗ] **[ಶ್ರೀ ಸುರೇಶ್ ಕುಲ್ಲೊಳ್ಳಿ, ಇವರ ಜಾಗಕ್ಕೆ]** |

**ಸೂಚನೆಗಳು:**

1. ಮೇಲಿನ ಸ್ಥಳನಿಯುಕ್ತಿ ಆದೇಶವು ಯಾವುದೇ ಹುದ್ದೆಗೆ / ಅಧಿಕಾರಿಯ ವರ್ಗಾವಣೆ ಸಂಬಂಧವಾಗಿ ನ್ಯಾಯಮಂಡಳಿಯ/ನ್ಯಾಯಾಲಯದ ತಡೆಯಾಜ್ಞೆ ಜಾರಿಯಲ್ಲಿದ್ದಲ್ಲಿ ಅಂತಹ ಹುದ್ದೆಗೆ/ಅಧಿಕಾರಿಗೆ ಚಲನಾದೇಶವನ್ನು ಜಾರಿಗೊಳಿಸಬಾರದು ಎಂಬ ಷರತ್ತಿಗೆ ಒಳಪಟ್ಟಿರುತ್ತದೆ.
2. ಮೇಲಿನ ವರ್ಗಾವಣೆ ಆದೇಶದನ್ವಯ **ಸ್ಥಳ ನಿರೀಕ್ಷಣೆಗೆ ಒಳಪಡುವ ವಲಯ ಅರಣ್ಯಾಧಿಕಾರಿಗಳು** ಮುಂದಿನ ಸ್ಥಳ ನಿಯುಕ್ತಿಗಾಗಿ ಕೂಡಲೇ **ಈ ಕಛೇರಿಯಲ್ಲಿ ಕಾರ್ಯ ವರದಿ ಮಾಡಿಕೊಳ್ಳುವುದು.**
3. ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಈ ಆದೇಶ ದಿನಾಂಕದಿಂದ **ಒಂದು ವಾರದೊಳಗೆ** ಪ್ರಸ್ತುತ ಹುದ್ದೆಯಿಂದ ಕಾರ್ಯವಿಮುಕ್ತಿ ಹೊಂದಿ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆಗೆ ನಿಯಮನುಸಾರ ಕಾಲಮಿತಿಯೊಳಗೆ ಕಾರ್ಯವರದಿ ಮಾಡಿಕೊಳ್ಳತಕ್ಕದ್ದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬೆಂಗಳೂರು (ಅರಣ್ಯ ಪಡೆ ಮುಖ್ಯಸ್ಥರು)

4. ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಸ್ಥಳನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಂಡ ಪ್ರತಿಯನ್ನು **ಅದೇ ದಿನ (ಇ-ಮೇಲ್ ಮೂಲಕ) ಈ ಕಛೇರಿಗೆ ಸಲ್ಲಿಸುವುದು.**
5. ನಿಗದಿತ ಸಮಯದಲ್ಲಿ ಕಾರ್ಯವರದಿ ಮಾಡದೇ ಇರುವ ಪಕ್ಷದಲ್ಲಿ ಸ್ಥಳನಿಯುಕ್ತಿಗೊಳಿಸಿದ ಹುದ್ದೆಗೆ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು **ತಕ್ಷಣ (ಇ-ಮೇಲ್ ಮೂಲಕ) ಈ ಕಛೇರಿಗೆ ಈ ಸಂಬಂಧ ವರದಿ ನೀಡುವುದು.**

Signed by
Rajiv Ranjan
Date: 15.09.2023 14:50:29

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

***ಪ್ರತಿ ಮಾಹಿತಿಗಾಗಿ/ ಹಾಗೂ ಸೂಕ್ತ ಕ್ರಮಕ್ಕಾಗಿ [ಇಲಾಖಾ ವೆಬ್‌ಸೈಟ್‌ನಲ್ಲಿ ಈ ಪ್ರಕಟಣೆಯ/ಇ-ಮೇಲ್ ಮೂಲಕ]:***

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು - **ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.**
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ/ ಧಾರವಾಡ/ ಕೆನರಾ ವೃತ್ತಗಳಿಗೆ./ಚಿಕ್ಕಮಗಳೂರು.
4. ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ/ಯಲ್ಲಾಪುರ/ಕಾರವಾರ ವಿಭಾಗಗಳಿಗೆ./ಕೊಪ್ಪ
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾವೇರಿ ಸಾಮಾಜಿಕ ಅರಣ್ಯ ವಿಭಾಗ, ಹಾವೇರಿ.
6. ಸಂಬಂಧಿಸಿದ ಎಲ್ಲಾ ವಲಯ ಅರಣ್ಯಾಧಿಕಾರಿಗಳಿಗೆ – **ಇಲಾಖಾ ವೆಬ್‌ಸೈಟ್‌ನಲ್ಲಿ ಈ ಪ್ರಕಟಣೆಯ/ನಿಯಂತ್ರಣಾಧಿಕಾರಿಗಳ ಮೂಲಕ.**
7. ಕಛೇರಿ ಆದೇಶ ಕಡತಕ್ಕೆ.

**ಪ್ರತಿ:**

ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರ ಆಪ್ತ ಕಾರ್ಯದರ್ಶಿ, ಕೊಠಡಿ ಸಂಖ್ಯೆ: 36 & 37, ನೆಲಮಹಡಿ, ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ * (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು